ಕರ್ನಾಟಕ ವಿಧಾನ ಸಭೆ

ಸೋಮವಾರ ೨೩ನೇ ಫೆಬ್ರುವರಿ ೧೯೮೩

ವಿಧಾನ ಸೌಧದಲ್ಲಿರುವ ವಿಧಾನಸಭಾ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಜವಳಿ) ಪೀಠವನ್ನಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಬಂಕಾಪುರ ಗ್ರಾಮದಲ್ಲಿ ಹಿಂದುಳಿದ ವರ್ಗದ ಪ್ರೌಢಶಾಲೆಯನ್ನು ಪ್ರಾರಂಭಿಸುವುದು

೧೧೮ (೫೦೫) ಶ್ರೀ ನೀಲಕಂಠಗೌಡ ಪಾಟೀಲ್ (ಶಿಗ್ಗಾಂವ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧) ಬಂಕಾಪುರ ಗ್ರಾಮದಲ್ಲಿ ಸರ್ಕಾರಿ ಹಿಂದುಳಿದ ವರ್ಗದ ಪ್ರೌಢಶಾಲೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ?

೨) ಹಾಗಿದ್ದಲ್ಲಿ ಅದನ್ನು ಯಾವಾಗ ಕಾರ್ಯಗತ ಮಾಡಬಹುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

೧) ಇಲ್ಲ.

೨) ಈ ಮೇಲೆ ಹೇಳಿದ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ನೀಲಕಂಠಗೌಡ ಪಾಟೀಲ್.—ಹಿಂದೆ ಸಚಿವರಿಗೆ ಸಾಕಷ್ಟು ಬಾರಿ ಈ ವಿಷಯದಲ್ಲಿ ಮನವಿ ಅರ್ಪಿಸಿದ್ದರೂ ಏನೂ ಮಾಡಲಿಲ್ಲ. ಬಂಕಾಪುರ ಗ್ರಾಮದಲ್ಲಿ ಹಿಂದುಳಿದ ವರ್ಗದ ಜನಸಂಖ್ಯೆ ಹೆಚ್ಚಾಗಿರುವುದರಿಂದ ಅಲ್ಲಿ ಪ್ರೌಢಶಾಲೆ ತೆರೆಯುವ ಅವಶ್ಯಕತೆ ಇದೆ ಎಂದು ಸಚಿವರಿಗೆ ವಿನಂತಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಹಿಂದುಳಿದ ವರ್ಗದವರಿಗೆ ಪ್ರೌಢಶಾಲೆ ತೆರೆಯಬೇಕೆಂಬುದು ಸಮಂಜಸವಲ್ಲ. ಆದರೂ ಪ್ರೌಢಶಾಲೆ ಬೇಕೆಂದು ಕೇಳುತ್ತಿದ್ದಾರೆ. ಸರ್ಕಾರಿ ಪ್ರೌಢಶಾಲೆಗಳ ಸ್ಥಾಪನೆ ಬೇಡವೆಂದು ಕಳೆದ ಸಾರಿ ತೀರ್ಮಾನ ಮಾಡಿತ್ತು. ಈ ಸಾರಿ ಇನ್ನೂ ಹೆಚ್ಚಾರ ಮಾಡಿಲ್ಲ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಎಸ್. ಮಣಿ—(ಸದಸ್ಯರು ಹಾಜರಿರಲಿಲ್ಲ)

ಶ್ರೀ ಪಂಪಾಪತಿ—(ಸದಸ್ಯರು ಹಾಜರಿರಲಿಲ್ಲ)

ಕಲಘಟಗಿ ತಾಲ್ಲೂಕಿಗೆ ಪ್ರೌಢಶಾಲೆ ಮಂಜೂರಾತಿ

೧೨೧ (೫೦೭ ಎ) ಶ್ರೀ ಜಿ. ಸಿ. ಸಿದ್ಧನಗೌಡ (ಕಲಘಟಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ? ಆ ಪೈಕಿ ಕಲಘಟಗಿ ತಾಲ್ಲೂಕಿನಲ್ಲಿ ಎಷ್ಟಿವೆ ? (ತಾಲ್ಲೂಕುವಾರು ವಿವರ ನೀಡುವುದು)